**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ -204/2017**

**ಚಾಸಾ - 02/ ಪ್ರಾಸಾ - 01**

| | |
|---|---|
| ಹೆಸರು | **ಸಂತೋಷ್ ಕುಮಾರ್** |
| ತಂದೆಯ ಹೆಸರು | **ಕುಮಾರ್** |
| ವಯಸ್ಸು | **34** |
| ಉದ್ಯೋಗ | **ವ್ಯಾಪಾರ** |
| ವಿಳಾಸ | **ಕೆಂಗೇರಿ** |

**ದಿನಾಂಕ:13-06-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನನಗೆ ಚಾಸಾ-1 ಮತ್ತು 3 ರವರು ಗೊತ್ತು. ಅವರು ನನ್ನ ಸ್ನೇಹಿತರು. ನನಗೆ ಆರೋಪಿಯು ಗೊತ್ತು. ಚಾಸಾ-1 ರವರಿಂದ ನನಗೆ ಆರೋಪಿಯ ಪರಿಚಯ ಆಗಿರುತ್ತದೆ. ದಿ.11-08-2016 ರಂದು ನಾನು, ಚಾಸಾ-1 ಮತ್ತು 3 ರವರು ತಾವರೆಕೆರೆ ಕಡೆಗೆ ಹೋಗಿದ್ದಾಗ, ಅಲ್ಲಿ ಮದ್ಯಪಾನವನ್ನು ಮಾಡಿದೆವು. ಅಲ್ಲಿ ಆರೋಪಿ ಮತ್ತು 4 ಜನರು ಮದ್ಯಪಾನವನ್ನು ಮಾಡುತ್ತಿದ್ದರು. ಆರೋಪಿಯು ದುರಾಹಂಕಾರದಿಂದ ಮಾತನಾಡಿದರು. ನಾನು ಆರೋಪಿಯನ್ನು ಯಾಕೆ ಈ ರೀತಿಯಾಗಿ ಮಾತನಾಡುತ್ತಿದ್ದೀರಾ ಎಂದು ಕೇಳಿದಾಗ ಆರೋಪಿಯು ಸುಮ್ಮನಾದರು.ನಂತರ ಚಾಸಾ-1 ಮತ್ತು 3 ರವರು ಮಲಗಿದ್ದಾಗ, ಆರೋಪಿಯು ಮಚ್ಚನ್ನು ತಂದು ನನ್ನ ಮುಖಕ್ಕೆ ಹೊಡೆಯಲು ಬಂದಾಗ ನಾನು ನನ್ನ ಎಡಗೈನ್ನು ಅಡ್ಡ ಇಟ್ಟ ಕಾರಣ ನನ್ನ ಎಡಗೈಗೆ ಏಟಾಗಿರುತ್ತದೆ. ಈಗ ಸಾಕ್ಷಿಗೆ ಮಚ್ಚನ್ನು ತೋರಿಸಿದ್ದು, ಅದರಿಂದಲೇ ಆರೋಪಿಯು ನನ್ನ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ. ಸದರಿ ಮಚ್ಚನ್ನು ಮುದ್ದೆಮಾಲು-1 ಎಂದು ಗುರುತಿಸಲಾಯಿತು. ಅಲ್ಲಿಂದ ನಾನು ಮುಂದೆ ಹೋಗಿ ದೇವಸ್ಥಾನದ ಹತ್ತಿರ

ಮಲಗಿ ಕೊಂಡೆನು. ನನಗೆ ಬೆಳಗ್ಗೆ ಗಾಯದ ಬಗ್ಗೆ ಗೊತ್ತಾಯಿತು. ನಂತರ ನಾನು ನಡೆದುಕೊಂಡು ಹೋದೆನು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿದ್ದಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.11-08-2016 ರಂದು ನೀವು ರಾಜರಾಜೇಶ್ವರಿ ನಗರದಲ್ಲಿ ಇದ್ದಾಗ, ನಿಮ್ಮ ಸ್ನೆಹಿತರಾದ ಚಾಸಾ-1 ರವರು ಸಿಕ್ಕಿದ್ದರು ಮತ್ತು ಚಾಸಾ-3 ರವರು ಸಹ ಅಲ್ಲಿಗೆ ಬಂದಿದ್ದರು ಮತ್ತು ಆಗ ರಾತ್ರಿ ಸುಮಾರು 10 ಗಂಟೆ ಆಗಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-1 ರವರ ಸ್ನೇಹಿತರಾದ ಆರೋಪಿಯು ಯಲಚಗುಪ್ಪೆಯ ಬಳಿ ಇರುವ ಫಾರಂ ಹೌಸ್ ನಲ್ಲಿ ಅಣಬೆ ಬೇಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ ನೀವು, ಚಾಸಾ-1 ಮತ್ತು 3 ರವರು ಅಲ್ಲಿಗೆ ಹೋಗಿ ಪಾರ್ಟಿ ಮಾಡೋಣ ಎಂದು ಚಾಸಾ-1 ರವರು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ ನೀವು ಸಹ ಅದಕ್ಕೆ ಒಪ್ಪಿಕೊಂಡು, ಕುಡಿಯಲು ಮದ್ಯದ ಬಾಟಲಿಗಳನ್ನು ತೆಗೆದುಕೊಂಡು ಚಾಸಾ-1 ರವರ ಮೋಟಾರ್ ಸೈಕಲ್ ಸಂ. ಕೆಎ-41-ಇಎಫ್-9043 ರಲ್ಲಿ ಮೂರು ಜನರು ಸಹ ರಾತ್ರಿ 11 ಗಂಟೆಗೆ ಫಾರಂ ಹೌಸ್ ಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಲ್ಲಿ ನೀವುಗಳು ಮತ್ತು ಆರೋಪಿಯು ಸೇರಿಕೊಂಡು ಚನ್ನಾಗಿ ಕುಡಿದಿರುತ್ತೀರಾ ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ.

ಕುಡಿದ ಅಮಲಿನಲ್ಲಿ ನಿಮಗೂ ಮತ್ತು ಆರೋಪಿಗೂ ಯಾವುದೋ ವಿಚಾರಕ್ಕೆ ಜಗಳ ಆರಂಭ ಆಗಿ, ಆರೋಪಿಗೆ ಕೋಪ ಬಂದು ಅಲ್ಲಿಯೇ ರೋಮಿನಲ್ಲಿ ಇದ್ದ ಕಬ್ಬಿಣದ ಮಚ್ಚನ್ನು ತೆಗೆದುಕೊಂಡು ನಿಮಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಯು ಅವರ ಕೈಯಲ್ಲಿ ಇದ್ದ ಮಚ್ಚಿನಿಂದ ನಿಮ್ಮ ತಲೆಗೆ, ಕುತ್ತಿಗೆಗೆ, ಎರಡೂ ಕೈಗಳಿಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ತಕ್ಷಣ ಚಾಸಾ-1 ಮತ್ತು 3 ರವರು ಜಗಳವನ್ನು ಬಿಡಿಸಿದರು ಮತ್ತು ನಿಮ್ಮನ್ನು ಯಾವುದೋ ವಾಹನದಲ್ಲಿ ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆಯನ್ನು ಕೊಡಿಸಿ ನಿಮ್ಮ ಮನೆಯವರಿಗೆ ತಿಳಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ.ಜಿ. ಹೆಚ್. ಎಂ, ವಕೀಲರಿಂದಃ-**

ನಾನು ಪಿ.ಯು.ಸಿಯನ್ನು ಅರ್ಧಕ್ಕೆ ಓದಲು ಬಿಟ್ಟಿರುತ್ತೇನೆ. ನನ್ನ ಹೇಳಿಕೆಯನ್ನು ನಾನೇ ಬರೆದಿರುತ್ತೇನೆ ಮತ್ತು ಅದರಲ್ಲಿ ಇರುವ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ನಾನು ಪಿ.ಎಸ್.ಐ ರವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಮತ್ತು ಅವರ ಹೆಸರು ನನಗೆ ಗೊತ್ತಿಲ್ಲ. ದಿ.02-09-2016 ರಂದು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಬೆಳಗ್ಗೆ 10 ಗಂಟೆಯ ನಂತರ ನನ್ನ ಹೇಳಿಕೆಯನ್ನು ಬರೆದುಕೊಟ್ಟಿರುತ್ತೇನೆ. ಗಲಾಟೆಯು ರಾತ್ರಿ ಸುಮಾರು 10.30 ರ ಸಮಯದಲ್ಲಿ ಪ್ರಾರಂಭ ಆಗಿರುತ್ತದೆ ಮತ್ತು ಯಾವ ಸಮಯದಲ್ಲಿ ಮುಕ್ತಾಯ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಗಲಾಟೆ ನಡೆಯುವ

ಸಮಯದಲ್ಲಿ ನಾನು, ಆರೋಪಿ, ಚಾಸಾ-1 ಮತ್ತು 3 ರವರು ಮಾತ್ರ ಇದ್ದೇವು.

02. ನಾನು ಹೋಗಿದ್ದ ಫಾರಂ ಹೌಸ್ ಹೆಸರು ವಿಜಯ ಫಾರಂ ಹೌಸ್ ಆಗಿದೆ. ಸದರಿ ಫಾರಂ ಹೌಸ್ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನಾನು, ಚಾಸಾ-1 ಮತ್ತು 3 ರವರು ಒಂದೇ ದ್ವಿಚಕ್ರ ವಾಹನದಲ್ಲಿ ಶಿರ್ಕೆ ಯಿಂದ ಫಾರಂ ಹೌಸ್ ಗೆ ಹೋದೆವು. ಫಾರಂ ಹೌಸ್ ಗೆ ರಾತ್ರಿ ಸುಮಾರು 10 ರಿಂದ 10.15 ರ ಸಮಯದಲ್ಲಿ ಹೋದೆವು. ನೀವು ಆರೋಪಿಯು ಫಾರಂ ಹೌಸ್ ನಲ್ಲೆ ಮೊದಲ ಬಾರಿಗೆ ನೋಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾವು ಹೋದ ದ್ವಿಚಕ್ರವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ನನ್ನ ಹೇಳಿಕೆಯಲ್ಲಿ ದ್ವಿಚಕ್ರವಾಹನದ ಸಂಖ್ಯೆಯನ್ನು ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ಇದೇ ಮೊದಲ ಬಾರಿಗೆ ನೀವು ಮುದ್ದೆ ಮಾಲು-1 ನ್ನುನೋಡುತ್ತಿದ್ದೀರಾ ಎಂದರೆ ಸಾಕ್ಷಿಯು ಕೃತ್ಯ ನಡೆದ ಸಮಯದಲ್ಲಿ ನೋಡಿದ್ದೇನೆ ಎನ್ನುತ್ತಾರೆ. ಮುದ್ದೆ ಮಾಲು-1 ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿಯೂ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

03. ಆರೋಪಿಯು ನನ್ನ ಎಡಗೈಗೆ 2 ಬಾರಿ ಮಾತ್ರ ಹೊಡೆದಿರುತ್ತಾರೆ ಮತ್ತು ಅದನ್ನು ಹೊರತುಪಡಿಸಿ ಬೇರೆ ಎಲ್ಲೂ ಸಹ ಆರೋಪಿಯು ನನಗೆ ಹೊಡೆದಿರುವುದಿಲ್ಲ. ಸದರಿ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನನಗೆ ರಕ್ತ ಗಾಯ ಆಗಿರುತ್ತದೆ. ಸದರಿ ಕೃತ್ಯದಿಂದ ನನ್ನ ಬಟ್ಟೆಗೆ ರಕ್ತದ ಕಲೆ ಆಗಿರುತ್ತದೆ. ನನ್ನ ಬಟ್ಟೆಗಳನ್ನು ಪೋಲೀಸರು ತೆಗೆದುಕೊಂಡು ಹೋಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಕೃತ್ಯ ನಡೆದ ಸಮಯದಲ್ಲಿ ನನಗೆ ಪ್ರಜ್ಞೆ ಇತ್ತು. ಗಲಾಟೆ ಆದ ನಂತರವೂ ನನಗೆ ಪ್ರಜ್ಞೇ ಇತ್ತು ಮತ್ತು ನಾನು ದೇವಸ್ಥಾನದ ಹತ್ತಿರ ಹೋಗಿ ಮಲಗಿರುತ್ತೇನೆ. ಸದರಿ ದೇವಸ್ಥಾನ ಸಾಯಿಬಾಬ

ದೇವಸ್ಥಾನ ಆಗಿದೆ ಮತ್ತು ಅದು ಯಾವ ಗ್ರಾಮದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿರುವ ವಿಷಯವನ್ನು ನೀವು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ದೇವಸ್ಥಾನದಿಂದ ನಾನು ಆರ್. ಆರ್. ನಗರಕ್ಕೆ ಹೋದೆನು ಅಲ್ಲಿಗೆ ನನ್ನ ಅಣ್ಣ ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ದಿ.12-08-2016 ರಂದು ನಾನು ಆಸ್ಪತ್ರೆಗೆ ಹೋಗಿ ದಾಖಲಾಗಿ ಒಂದು ವಾರಗಳ ಕಾಲ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಾನು ಅದೇ ತಿಂಗಳಿನಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಆಗಿರುತ್ತೇನೆ ಆದರೆ ಯಾವ ದಿನಾಂಕದಂದು ನಾನು ಬಿಡುಗಡೆ ಆದೆನು ಎಂದು ನನಗೆ ಗೊತ್ತಿಲ್ಲ. ನೀವು ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನೀವು ಕೃತ್ಯ ನಡೆದ ಸ್ಥಳದಿಂದ ಹತ್ತಿರದಲ್ಲಿ ಇರುವ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

04. ಮುದ್ದೆ ಮಾಲು-1 ನ್ನು ಪೋಲೀಸರಿಗೆ ಯಾರು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನೀವು ಚನ್ನಾಗಿ ಕುಡಿದಿದ್ದರಿಂದ ಬಿದ್ದು ಗಾಯ ಮಾಡಿಕೊಂಡಿರುತ್ತೀರಾ ಮತ್ತು ಆರೋಪಿಗೆ ತೊಂದರೆಯನ್ನು ಕೊಡುವ ಉದ್ದೆ ೀಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಯು ನಿಮ್ಮ ಮೇಲೆ ಹಲ್ಲೆ ಯನ್ನು ಮಾಡಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಮತ್ತು ಮುದ್ದೆ ಮಾಲು-1 ರಿಂದ ಹೊಡೆದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು, ಚಾಸಾ-1 ಮತ್ತು 3 ರವರು ಸ್ನೇಹಿತರಾಗಿರುವ ಕಾರಣದಿಂದ ಅವರಿಬ್ಬರ ಮಾತನ್ನು ಕೇಳಿಕೊಂಡು

ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**